ದಿನಾಂಕ **03-1-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು ಃ ಶ್ರೀ ಆರ್ ವಿ ಜೆ ಪ್ರತಿವಾದಿ ಪರ ವಕೀಲರಿಂದ -

ನಾವು ಜಮೀನು ಖರೀದಿ ಮಾಡುವ ಮುಂಚೆ ಅಕ್ಕಪಕ್ಕದ ಜಮೀನು ಮಾಲೀಕರು ಯಾರ ಎಯಿ ಚೌಕಾಶಿ ಮಾಡಿರುತ್ತೇವೆ. ದಕ್ಷಿಣಕ್ಕೆ ಮಾದಗೌಡ ಎಂಬುವವರ ಜಮೀನು, ಉತ್ತರಕ್ಕೆ ಗಟಿಗೆಣ್ಣವರ ಇವರ ಜಮೀನು ಬರುತ್ತದೆ. ಸರ್ವೆ ನಂ. 270 ರ ಜಮೀನನ್ನು ಪ್ರತಿವಾಗದಿ ಖರೀದಿಸಿದ ಬಗ್ಗೆ ಖರೀದಿ ಪತ್ರವನ್ನು ನಾವು ಹಾಜರ ಪಡಿಸಿರುತ್ತೇವೆ. ಅದರಲ್ಲಿ ಚೆಕ್ಕುಬಂದಿ ನಮೂದು ಮಾಡಿದ ಬಗ್ಗೆ ನನಗೆ ಗೊತ್ತಿರುತ್ತದೆ. ದಕ್ಷಿಣಕ್ಕೆ ಪ್ರತಿವಾದಿಯರ ಜವೀನು ಇದೇ ನಂಬರದ ಪೈಕಿ ಜಮೀನು ಎಂದು ಇರುತ್ತದ ಎಂದರೆ ಸರಿ . ಖರೀದಿ ಪತ್ರದಲ್ಲಿ ಕ್ಷೇತ್ರ 2 ಎಕರೆ 29 ವರೆ ಗುಂಟೆ ಎಂದು ಬರೆದಿರುತ್ತದೆ ಎಂದರೆ ಸರಿ . ಖರೀದಿ ಪತ್ರವನ್ನು ನಾನು ನೋಡಿಲ್ಲ ಅದರಲ್ಲಿ ಬರದ ಮಾಹಿತಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರು ಸರ್ವೆ ನಂ. 270 ನ್ನು ರಾಯಪ್ಪ ಸಿದ್ದಪ್ಪಾ ಚೌಗಲಾ ಇವರ ಕಡೆಯಿಂದ ಖರೀದಿ ಮಾಡಿರುತ್ತಾರೆ. ಪ್ರತಿವಾದಿಯರು ಜಮೀನನ್ನು ರಾಯಪ್ಪ ಚೌಗಲಾ ಇವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ನಮ್ಮ ತಂದೆಯರ ಹೆಸರು ಇದ್ದು ದಾವಾಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಖರೀದಿ ಪತ್ರದಲ್ಲಿ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಪ್ರತಿವಾದಿಯರ ಜಮೀನು ಎಂದು ಬರೆಸಿರುತ್ತೇವೆ. ಪ್ರತಿವಾದಿಯ ಸರ್ವೆ ನಂ. 270 ಕ್ಕೆ 2 ಖರೀದಿ ಪತ್ರಗಳು ಇವೆ ಎಂದರೆ ಸರಿ . ಅವೆರಡೂ ಖರೀದಿ ಪತ್ರಗಳು ನಮ್ಮ ಖರೀದಿ ಪತ್ರಕ್ಕಿಂತ ಮುಂಚೆ ಆಗಿವೆ ಎಂದರೆ ಸರಿ . ಪ್ರತಿವಾದಿಯರು ಖರೀದಿ ಪತ್ರದ ಪ್ರಕಾರ ಕಬ್ಜಾ ವೈವಾಟಿಯಲ್ಲಿರುತ್ತಾರೆ ಎಂದರೆ ಸರಿ . ಪ್ರತಿವಾದಿಯರು ನೀರಾವರಿ ಬೆಳೆ ಬೆಳೆಯುತ್ತ ಬಂದಿರುತ್ತಾರೆ ಎಂದರೆ ಸರಿ . ಸರ್ವೆ ನಂ. 270 ರಲ್ಲಿ ಯಾವುದೇ ಭಾವಿ ಅಥವಾ ಬೋರು ಇಲ್ಲ ಎಂದರೆ ಸರಿ . ಪ್ರತಿವಾದಿಯರ ಖರೀದಿ ಪತ್ರದ ಪ್ರಕಾರ ಡೈರಿ ಮಂಜೂರು ಆಗಿದೆ

ಎಂದರೆ ಸರಿ . ಸಾಕ್ಷಿಗೆ 5 ಛಾಯಾ ಚಿತ್ರಗಳನ್ನು ತೋರಿಸಲಾಗಿ ಅದರಲ್ಲಿ ಬೆಳೆದ ಬೆಳೆಯು ಪ್ರತಿವಾದಿಯರು ತಮ್ಮ ಜಮೀನಿನಲ್ಲಿ ಬೆಳೆದಿದ್ದಾರೆ ಎಂದು ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿ.ಡಿ-1 ರಿಂದ ನಿ.ಡಿ-5 ಎಂದು ಗುರುತಿಸಲಾಯಿತು. ಸಿಡಿಯನ್ನು ನಿ.ಡಿ-6 ಎಂದು ಗುರುತಿಸಲಾಯಿತು. ಅದೇ ರೀತಿ ಪ್ರತಿವಾದಿಯರು ತಮ್ಮ ಜಮೀನಿನಲ್ಲಿ ಕಬ್ಬು ಬೆಳೆದು ಕಾರಖಾನೆಗೆ ಕಳುಹಿಸುತ್ತಾರೆ ಎಂದರೆ ಸರಿ .

ಪ್ರತಿವಾದಿಯರು ನಮ್ಮ ತಂದೆ ಮಾಡಿದ ದಾವೆಗೆ ಕೈಫಿಯತ್ ಸಲ್ಲಿಸಿ ಹಾತ್ ನಕಾಶೆ ಸಲ್ಲಿಸಿರುತ್ತಾರೆ ಎಂದರೆ ಸರಿ . ಹಾತ್ ನಕಾಶೆ ಪ್ರಕಾರ ದಕ್ಷಿಣಕ್ಕೆ ಮಾದಗೌಡ ಇವರ ಜಮೀನು ಇದ್ದು , ಅದರ ಬಾಜು ರಸ್ತೆ ಇದ್ದು , ರಸ್ತೆ ಪಕ್ಕಕ್ಕೆ ದಕ್ಷಿಣಕ್ಕೆ ಪುನಃ ಅವರ ಜಮೀನು ಬರುತ್ತದೆ ಎಂದರೆ ಸರಿ . ಷದ್ರಿ ಜಮೀನು ರಿ .ಸ. ನಂ. 264/5 ಇದ್ದು ಅದರಲ್ಲಿ ಬೋರವೆಲ ಇರುತ್ತದ ಎಂದರೆ ನನಗೆ ಗೊತ್ತಿಲ್ಲ. ರಿ .ಸ. ನಂ. 264/5 ರ ಜಮೀನಿನಿಂದ ಪೈಪಲೈನ ಮೂಲಕ ಸರ್ವೆ ನಂ. 270 ಕ್ಕೆ ನೀರಾವರಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಪ್ರತಿವಾದಿಯರು ಸಲ್ಲಿಸಿದ ಹಾತ್ ನಕಾಶೆ ಸರಿ ಇರುತ್ತದೆ .

ದಾವಾಸ್ತಿಗೆ ಸಂಬಂಧಿಸಿದಂತೆ ನಾವು ಮೋಜಣಿ ಮಾಡಲು ಅರ್ಜಿ ಸಲ್ಲಿಸಿರುವುದಿಲ್ಲ. ದಾವೆಗಿಂತ ಮುಂಚೆ ಮೋಜಣಿ ಆಗಿರುತ್ತದೆ. ಅದರ ಬಗ್ಗೆ ಪಿಟಿ ಶೀಟ ಅಥವಾ ನಕಾಶೆ ನಮ್ಮ ಹತ್ತಿರ ಇರುವುದಿಲ್ಲ. ಯಾವ ದಿನಾಂಕದಂದು ಮೋಜಣಿ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ನಾವು ದಾವಾಸ್ತಿಯಲ್ಲಿ ಯಾವ ವರ್ಷದಲ್ಲಿ ಯಾವ ಬೆಳೆ ಬೆಳೆದಿದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ. 27 ಗುಂಟೆ ಜಮೀನಿನ ದಾವಾಸ್ತಿಗೆ ಬಾಂದ ಕಲ್ಲು ವಗೈರೆ ಇರುವುದಿಲ್ಲ. ಇದೇ 27 ಗುಂಟೆ ಜಮೀನು ಎಂದು ತೋರಿಸಲು ಖರೀದಿ ಪತ್ರ ಹೊರತು ಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ. ಪ್ರತಿವಾದಿಯರ 2 ಜಮೀನುಗಳು ಒಂದಕ್ಕೊಂದು ಹೊಂದಿಕೊಂಡು ಇದ್ದು ದಾವಾಸ್ತಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ಮೂಲ ಮಾಲೀಕರು ದಾವಾಸ್ತಿ 27 ಗುಂಟೆ ಜಮೀನನ್ನು ನಮಗೆ ತೋರಿಸಿರುತ್ತಾರೆ. ಆ ಪ್ರಕಾರ ಕಲ್ಲು ಹುಗಿದು ಹದ್ದುಬಸ್ತು ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

ನಮಗೆ ಖರೀದಿ ಕೊಟ್ಟ ಮೂಲ ಮಾಲೀಕರಾದ ಮರೆಣ್ಣವರ ಎಂದೂ ದಾವಾಸ್ತಿ ಕಬ್ಜಾ ವೈವಾಟಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ಮರೆಣ್ಣವರ ಇವರ ಖಾಯಂ ತರೀಖ ಕೋಚರಿ ಗ್ರಾಮದಲ್ಲಿರುತ್ತಾರೆ ಎಂದರೆ ಸರಿ . ಕೋಚರಿ ಶಿರಗಾಂವದಿಂದ 15-20 ಕಿ.ಮೀ ದೂರದಲ್ಲಿದೆ ಎಂದರೆ ಸರಿ . ನಮ್ಮ ತಂದೆಯವರು ಎಂದೂ ದಾವಾಸ್ತಿಯಲ್ಲಿ ಕಬ್ಜಾ ವೈವಾಟಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ 30 ವರ್ಷಗಳ ಹಿಂದೆ ಹುಕ್ಕೇರಿಯಲ್ಲಿದ್ದರು ಎಂದರೆ ಸರಿ . ಆದಕಾರಣ ಅವರಿಗೆ ಶಿರಗಾಂವ ಗ್ರಾಮದ ಜಮೀನು ವೈವಾಟದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾವು ಮತ್ತು ಮರೆಣ್ಣವರ ಇವರು ಶ್ಯಾಮೀಲಾಗಿ ಖರೀದಿ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ ತಂದೆಯವರು ನ್ಯಾಯಾಲಯಕ್ಕೆ ಬಂದು ಜವಾಬು ಕೊಡುವ ಸ್ಥಿತಿಯಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**